ಕಸವೆಂದರೆ ಕಾಸು

ನಗರಗಳಲ್ಲಿ ಕಸನಿರ್ವಹಣೆಗೆ ಸೂರ್ಯಪೇಟೆ ಯಶೋಗಾಥೆ

ಸಮುದಾಯ ಕೇಂದ್ರಿತ ಪರಿಸರ ಸಂರಕ್ಷಣೆಗೆ ಈ ದೇಶದಲ್ಲಿ ಬರವಿಲ್ಲ. ಹೊರಗಿನ ಆರ್ಥಿಕ, ತಾಂತ್ರಿಕ ನೆರವಿಲ್ಲದೆ ವಿಶಿಷ್ಟವಾದ ಯಶೋಗಾಥೆಗಳನ್ನು ಎಲ್ಲಾ ಕೃಷಿ, ಕೈಗಾರಿಕೆ, ನಗರ ಮತ್ತು ಸೇವಾ ಕ್ಷೇತ್ರಗಳಲ್ಲಿ ಗುರುತಿಸಬಹುದಾಗಿದೆ. 1972 ರಿಂದ 36 ವರ್ಷಗಳಲ್ಲಿ 'ಸಹ್ಯ ಅಭಿವೃದ್ಧಿ' ಸಾಧ್ಯ ಎಂಬುದನ್ನು ಈ ಯಶೋಗಾಥೆಗಳು ಸಾಬೀತುಪಡಿಸುತ್ತವೆ. ದೇಶದಲ್ಲಿ ಪರಿಸರ ಕಾನೂನುಗಳು ಅಪಾರ ಪ್ರಮಾಣದಲ್ಲಿವೆ. ಇತ್ತೀಚೆಗೆ ಒಂದು ಪುಟ್ಟ ಪಟ್ಟಣ ಕಾನೂನಿನ ಸಮಯವನ್ನು ಹಿಂದೆ ಹಾಕಿ "ಸಮುದಾಯ ಕೇಂದ್ರಿತ" ಗಟ್ಟಿ ಕಸ ನಿರ್ವಹಣೆಯಲ್ಲಿ ಮಾರ್ಗೋಪಾಯ ಸೂಚಿಸಿದೆ. ಇದು ಆಂಧ್ರಪ್ರದೇಶದ ನೆಲಗೊಂಡ ಜಿಲ್ಲೆಯ 1.3 ಲಕ್ಷ ಜನಸಂಖ್ಯೆಯ 34 ಚ.ಕಿ.ಮೀ ನಗರ ಪ್ರದೇಶದ 'ಸೂರ್ಯಪೇಟೆ'.

2002ರ ಕೊನೆಯಲ್ಲಿ ಅಲ್ಲಿನ ನಗರಸಭಾ ಆಯುಕ್ತ ಎಸ್.ಎ.ಖಾದರ್ ಸಾಹೇಬ್ ಕೇವಲ ಎರಡು ವರ್ಷಗಳಲ್ಲಿ ಒಂದು ಯಶೋಗಾಥೆಯ ಕೇಂದ್ರ ಬಿಂದು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆಯ ನಗರಾಭಿವೃದ್ಧಿಯನ್ನು ಹುಟ್ಟು ಹಾಕಿ, ಅನುಷ್ಠಾನಗೊಳಿಸಿ, ಉಳಿಸಿಕೊಳ್ಳಲು ನೆರವಾಗಿ ಒಂದು ಉದಾಹರಣೆಯಾಗಿದ್ದಾರೆ.

ನಗರದಲ್ಲಿದ್ದ 360 ಕಸದ ತೊಟ್ಟಿಗಳನ್ನು ಬೀದಿಗಳಿಂದ 235 ಪೌರಕಾರ್ಮಿಕ ನೆರವಿನಿಂದ ತೆಗೆದುಹಾಕಲಾಯಿತು. ಪ್ರತಿದಿನ 42 ಟನ್ನುಗಳ ಕಸವನ್ನು ಸಂಗ್ರಹಿಸಲು ಪ್ರತಿ ಮನೆಗೆ ಸಾಂಸ್ಕೃತಿಕ ವಿಧಾನಗಳಿಂದ ಕಸವನ್ನು ಮೂಲದಲ್ಲೇ ಬೇರ್ಪಡಿಸಲು ಅರಿವು, ಶಿಕ್ಷಣ ಮತ್ತು ಸಂವಹನವನ್ನು ಹಮ್ಮಿಕೊಳ್ಳಲಾಗಿತ್ತು. ಬೀದಿನಾಟಕ, ಬೀದಿಮಟ್ಟದ ಸಭೆ, ಪ್ರತಿ ಮನೆಗೆ ಕರಪತ್ರ, ನಗರಸಭೆ ಸಿಬ್ಬಂದಿ ಮನೆಯ ಒಡೆಯರಿಗೆ ಅರಿಶಿನ ಕುಂಕುಮದಿಂದ ಆಹ್ವಾನ ಹೀಗೆ ವಿನೂತನ ಸಾಂಸ್ಕೃತಿಕ ವಿಧಾನಗಳನ್ನು ಬಳಸಿಕೊಂಡು ಜನಸಮುದಾಯವನ್ನು ತೀವ್ರಗೊಳಿಸಲಾಯಿತು.

ಕಸ ನಿರ್ವಹಣೆಯಲ್ಲಿ ಜನಸಮುದಾಯವನ್ನು ತೀವ್ರವಾಗಿ ತೊಡಗಿಸಿಕೊಳ್ಳಲು ನಗರಸಭೆ ಆಯುಕ್ತರು, ವಿವಿಧ ಸಾಮಾಜಿಕ ಸಮಸ್ಯೆಗಳನ್ನು ಜನರ ಮುಂದಿಟ್ಟರು. ಮದುವೆಗೆ ಸರಿಯಾದ ವಯಸ್ಸು, ಶಿಕ್ಷಣದ ಮಹತ್ವ, ಕುಟುಂಬ ಯೋಜನೆ ಪಾಲನೆ, ಗರ್ಭಿಣಿಯರಿಗೆ ಆರೋಗ್ಯ ಪಾಲನೆ, ಸಾಂಕ್ರಾಮಿಕ ರೋಗಗಳ ನಿವಾರಣೆ, ಮತ್ತಿತರ ಸಾಮಾಜಿಕವಾಗಿ ಪ್ರಸ್ತುತವಾದ ಗಂಭೀರ ವಿಷಯಗಳನ್ನು ಕೈಗೆತ್ತಿಕೊಂಡು ಚರ್ಚೆಗೆ ಸಮುದಾಯಗಳನ್ನು ತೊಡಗಿಸಲಾಯಿತು.

ಜನರಲ್ಲಿ ಅರಿವು ಹೆಚ್ಚಿಸಿದಂತೆ 9 ಟ್ರಾಕ್ಟರ್, ಮೂರು ತಿಚಕ್ರ ಸೈಕಲ್ ಮತ್ತು 3 ಸೈಕಲ್ ರಿಕ್ಷಾಗಳನ್ನು ಬೇರ್ಪಡಿಸಿದ ಕಸವನ್ನು ಸಂಗ್ರಹಿಸಲು ಬಳಸಲಾಯಿತು. ಪರಿಸರ ಪ್ರಜ್ಞೆಯ ದ್ಯೋತಕವೆಂಬಂತೆ ಜನರು ತೀವ್ರವಾಗಿಕಾರ್ಯಕ್ರಮವನ್ನು ತೆಗೆದುಕೊಂಡರು. ಗಂಟೆ ಬಾರಿಸಿದ ಪ್ರತಿಯೊಂದು ಸಕ ಸಂಗ್ರಹಣೆಯ ಕರೆಗೆ ಜನರು ಓಡೋಡಿ ಬಂದು ಬೇರ್ಪಡಿಸಿದ ಕಸ ನೀಡಿದರು. ಪ್ರತಿಯೊಂದು ಮನೆಗೆ ಸರಾಸರಿ 100 ರೂ.ಗಳಂತೆ ನಗರಸಭೆ ವೆಚ್ಚ ಮಾಡಿತು. ಕೇವಲ ಬೇರ್ಪಡಿಸಿದ ಪ್ಲಾಸ್ಟಿಕ್ ಕಸದಿಂದ ರೂ 26 ಸಾವಿರ ಲಾಭವನ್ನು ಮೊದಲ ವರ್ಷದಲ್ಲೇ ಸೂರ್ಯಪೇಟೆ ಪಡೆಯಿತು.

ಈ ಕ್ರಿಯೆ 2003ರ ಹೊತ್ತಿಗೆ ಸಂಪೂರ್ಣವಾಯಿತು. 31ನೇ ಡಿಸೆಂಬರ್ 2003 ಸುಪ್ರೀಂಕೋರ್ಟ್ ನಿಗದಿಪಡಿಸಿದ ಕಸವನ್ನು ಮೂಲದಲ್ಲೇ ಬೇರ್ಪಡಿಸಿದ ಗೊಬ್ಬರ ಮಾಡುವ ಆದೇಶ ಜಾರಿಗೆಯಾಗುವ ಮುನ್ನವೇ ನಡೆದಿತ್ತು. ಸೂರ್ಯಪೇಟೆ ದೇಶದ ಮೊದಲ ಪುಟ್ಟ ಪಟ್ಟಣ. "ಕಸದ ತೊಟ್ಟಿ ರಹಿತ – ಶೂನ್ಯ ಕಸ ವಸತಿ ಸ್ಥಳವಾಗಿ" ಅಂತರಾಷ್ಟ್ರೀಯ ಗುಣ ಖಾತರಿ ಖಖಟಿ – 14000 – 2004 ಅರ್ಹತೆಯನ್ನು ಪಡೆದ ಮೊಟ್ಟಮೊದಲ ನಗರವಾಯಿತು. ಸುಪ್ರೀಂಕೋರ್ಟ್ ಹಾಗೂ ವಿಶ್ವಸಂಸ್ಥೆಯ ಶಹಬಾಸ್‌ಗಿರಿ ಪಡೆಯಿತು.

ಸೂರ್ಯಪೇಟೆ ದೇಶದ ಸಾವಿರಾರು ಪಟ್ಟಣಗಳಿಗೆ ರಾಜ್ಯಸ 213 ಸ್ಥಳೀಯ ಸಂಸ್ಥೆಗಳಿಗೆ ಒಂದು ಮುಂಚೂಣಿಯಲ್ಲಿರುವ ಉದಾಹರಣೆ ಕೂಡ ಕೆಲವು ಜಾಗತಿಕ ವೈಜ್ಞಾನಿಕ ಸತ್ಯಗಳನ್ನು ದೃಢೀಕರಿಸುತ್ತದೆ.

1. ಕಸವನ್ನು ಮೂಲದಲ್ಲೇ ಬೇರ್ಪಡಿಸಿದರೆ, ಅನಗತ್ಯ ಕಸನಿರ್ವಹಣೆ ವೆಚ್ಚ ತಪ್ಪುತ್ತದೆ. "ಭೂಭರ್ತಿ" ಯಲ್ಲಿ ಕಸವನ್ನು ತುಂಬುವ ಪ್ರಮಾಣ ಕ್ಷೀಣಿಸುತ್ತದೆ.
2. ಪರಿಸರ ಸ್ನೇಹವಲ್ಲದ ಕಸವನ್ನು ಸುಡುವ (ಖಟಿಛಿಟಿಜಡಿಚಿಣುಠಟಿ) ಮತ್ತು ಕಸವನ್ನು ಹೂಳುವ (ಟಚಿಟಿಜಜಿಟಟ) ಗಳ ಅಗತ್ಯತೆ ಕ್ಷೀಣಿಸುತ್ತದೆ. ಈಗಾಗಲೇ ಯೂರೋಪಿಯನ್ ರಾಷ್ಟ್ರಗಳ ತೀವ್ರ ಆರ್ಥಿಕ ಮತ್ತು ಪರಿಸರ ಹಾನಿಯಿಂದ ಪಾಠವನ್ನು ಕಲಿತಿವೆ. ಕಸವನ್ನು ಸಂಪೂರ್ಣವಾಗಿ ಬೇರ್ಪಡಿಸಿ ಉಪಯುಕ್ತ ವಸ್ತುಗಳ ಪುನರ್ ಬಳಕೆ ಹಾಗೂ ಗೊಬ್ಬರ ಅನಿವಾರ್ಯವಾಗಿದೆ.
3. ಸಣ್ಣ ಪಟ್ಟಣಗಳಲ್ಲಿ 'ಸಂಪನ್ಮೂಲದ ಕೊರತೆ' ಗಿಂತಲೂ ಇಚ್ಛಾಶಕ್ತಿ ಮುಖ್ಯ. ರಾಷ್ಟ್ರೀಯ ಅಥವಾ ಅಂತರಾಷ್ಟ್ರಿಯ ಇಲ್ಲವೆ ರಾಜ್ಯ ಸರ್ಕಾರದ ಯಾವ ನೆರವನ್ನು ಪಡೆಯದೆ ಸುರ್ಯಪೇಟೆಯ ಜನತೆ ಸಮುದಾಯ ಭಾಗವಹಿಸುವಿಕೆ ಸಾಧ್ಯತೆ ತೋರಿಸಿದ್ದಾರೆ.
4. ಖಾಸಗಿಕರಣದಿಂದ ಮಾತ್ರವೇ ಕಸ ನಿರ್ವಹಣೆ ಸಾಧ್ಯ ಎಂಬುದರ ಹಿಂದೆ ದುಂಬಾಲು ಬೀಳುವ ಪ್ರಯತ್ನಗಳಿಗೆ – ಸೂರ್ಯಪೇಟೆ ಒಂದು ವಿಶಿಷ್ಟ ಸಹ್ಯ ಅಭಿವೃದ್ಧಿಯ ಪ್ರಯೋಗ.

1. ಗಾಂಧೀಜಿ ಹಿಂದೆ ಒಮ್ಮೆ "ದೇಶಕ್ಕೆ ಸ್ವಾತಂತ್ರಯಕ್ಕಿಂತ ನೈರ್ಮಲ್ಯ ಬಹುಮುಖ್ಯ" ಎನ್ನುವ ವಿಚಾರ ದೃಷ್ಟಿಕೋನಕ್ಕೆ ಸೂರ್ಯಪೇಟೆ ಉತ್ತರವಾಗಿದೆ.

2. ಮಹಾನಗರಗಳಲ್ಲಿನ ಬಡಾವಣೆಗಳಲ್ಲೂ ಸೂರ್ಯಪೇಟೆಪ್ರಯೋಗ ಸುಲಭ ಸಾಧ್ಯ.